ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**S.C. No. 139/2019**

| ಸಾಕ್ಷಿಯ ಹೆಸರು | ಶ್ರೀ ಸಂತೋಷ್ ಕುಮಾರ್ | ಚಾಸಾಃ | ಫ್ರಾಸಾಃ |
|---|---|---|---|
| ತಂದೆಯ ಹೆಸರು | ಲೇಟ್ ನಂಜಾರೆಡ್ಡಿ | 18 | 11 |
| ವಯಸ್ಸು | 56 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **04.06.2026.** | |
| ಉದ್ಯೋಗ | ವ್ಯವಸಾಯ | | |
| ವಾಸ ಸ್ಥಳ | ವರ್ತೂರು | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದ್ದು ಮಹಜರ್ ಅನ್ನು ನಿಶಾನೆ.ಪಿ. 50 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 50 (ಎ) ಎಂದು ಗುರುತಿಸಲಾಯಿತು. ಬಹಳ ವರ್ಷಗಳ ಹಿಂದೆ ನಾನು ಸದರಿ ಸಹಿಯನ್ನು ಮಾಡಿರುತ್ತೇನೆ. ಪೊಲೀಸರಿ ಕೋರಿಕೆಯ ಮೇರೆಗೆ ನಿಶಾನೆ.ಪಿ. 50 ಕ್ಕೆ ಸಹಿ ಮಾಡಿದ್ದು ಅದರಲ್ಲಿ ಇರುವ ವಿಚಾರ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ನೋಡಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 04.09.2018 ರಂದು ಪೊಲೀಸರು ನನ್ನನ್ನು ಮತ್ತು ವಿಶ್ವನಾಥ್ ರವರನ್ನು ಮಡಿವಾಳದ FSL ಆವಾರಣಕ್ಕೆ ಬರಮಾಡಿಕೊಂಡಿದ್ದು ಹಾಗೂ ಸದರಿ ಸ್ಥಳದಲ್ಲಿ KA-03/AE-2652 ಅನ್ನು ಶಿವಕುಮಾರ್ ರವರು ತೋರಿಸಿದ್ದು ಅದರಲ್ಲಿ FSL ಅಧಿಕಾರಿಗಳು ಸಾಕ್ಷಿ ಪುರಾವೆಗಳನ್ನು ಶೇಖರಿಸಿದ್ದು ಹಾಗೂ ನಮ್ಮನ್ನು ಪಂಚರಾಗಿ ಸಹಕರಿಸಲು ಕೋರಿದ್ದು ಡಾ. ಕುಮುದಾ ರವರು ಕಾರಿನ ಡಿಕ್ಕಿ ಮತ್ತು ಬಾನೇಟ್ ಅನ್ನು ಪರಿಶೀಲನೆ ಮಾಡಿ ಅಲ್ಲಿದ ರಕ್ತವನ್ನು ಹಾಗೂ ರಕ್ತ ಮಹವಾದ ಒಂದು

ಕರ್ಚೀಫ್ ಅನ್ನು ನಮ್ಮ ಸಮಕ್ಷಮ ಸಂಗ್ರಹಿಸಿಕೊಟ್ಟಿದ್ದರು ಎಂದರೆ ಸರಿ ಅಲ್ಲ. ಸದರಿ ಸ್ಥಳದಲ್ಲಿ ನಿಶಾನೆ.ಪಿ. 50 ಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ ಅಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ : ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.